Bupa MAX

HEALTH INSURANCE

FORM NL-1A-B-RA
Name of the Insurer: Max Bupa Health Insurance Company Limited
Registration No. and Date of Registration with the IRDAI : 145 Dated 15th February 2010

REVENUE ACCOUNT FOR THE YEAR ENDED 31st MARCH, 2021 (Rs. in Lakhs)

SN	Particulars	For the year ended 31st March, 2021			For the year ended 31st March, 2020		
		Fire	Marine	Misc	Fire	Marine	Misc
1	Premiums earned (Net)	-	-	1,15,086.67	-	-	84,106.91
2	Profit/ (Loss) on sale/ redemption of Investments	-	-	223.66	-	-	281.24
3	Others	-	-	-	-	-	-
	Contribution from Shareholders Funds towards Excess EOM	-	-	17,623.62	-	-	14,735.50
	Accretion/Amortisation of (Premium)/Discount	-	-	(236.64)	-	-	207.24
4	Interest, Dividend & Rent - Gross	-	-	5,656.20	-	-	3,625.12
	Total (A)	-	-	**1,38,353.51**	-	-	**1,02,956.01**
1	Claims Incurred (Net)	-	-	64,555.51	-	-	45,006.91
2	Commission (Net)	-	-	6,348.07	-	-	4,287.56
3	Operating Expenses related to Insurance Business	-	-	54,954.21	-	-	41,945.75
4	Premium Deficiency	-	-	-	-	-	-
	Total (B)	-	-	**1,25,857.79**	-	-	**91,240.22**
	Operating Profit/(Loss) from Fire/Marine/Miscellaneous Business C= (A - B)	-	-	**12,495.72**	-	-	**11,715.79**
	Appropriations						
	Transfer to Shareholders' Account	-	-	12,495.72	-	-	11,715.79
	Transfer to Catastrophe Reserve	-	-	-	-	-	-
	Transfer to Other Reserves	-	-	-	-	-	-
	Total (C)	-	-	**12,495.72**	-	-	**11,715.79**

FORM NL-2A-B-PL
Name of the Insurer: Max Bupa Health Insurance Company Limited
Registration No. and Date of Registration with the IRDAI : 145 Dated 15th February 2010

PROFIT AND LOSS ACCOUNT FOR THE YEAR ENDED 31st MARCH, 2021 (Rs. In Lakhs)

SN	Particulars	For the year ended 31st March, 2021	For the year ended 31st March, 2020
1	**Operating Profit/(Loss)**		
	(A) Fire Insurance	-	-
	(B) Marine Insurance	-	-
	(C) Miscellaneous Insurance	12,495.72	11,715.79
2	**Income From Investments**		
	(A) Interest, Dividend & Rent - Gross	2,972.61	2,634.82
	(B) Profit on sale of investments	128.11	202.47
	(C) Accretion/ Amortisation of (Premium)/ Discount	(149.84)	(29.89)
3	**Other Income**	-	-
	- Gain/(Loss) on Foreign Exchange Fluctuation	(25.44)	(7.77)
	- Interest Income	11.08	8.69
	- Provisions written back	17.69	-
	Total (A)	**15,449.92**	**14,524.11**
4	**Provisions (Other than Taxation)**		
	(A) For diminution in the value of investments	(252.26)	1,500.00
	(B) For doubtful debts	2,834.51	3,500.02
	(C) Penalty	-	-
	(D) Others	-	-
5	**Other Expenses**		
	(A) Expenses other than those related to Insurance Business	217.94	943.79
	(B) Bad debts written off	-	-
	(C) Contribution to policyholders Funds towards Excess EOM	17,623.62	14,735.50
	Total (B)	**20,423.81**	**20,679.31**
	Profit /(Loss) Before Tax	**(4,973.89)**	**(6,155.20)**
	Provision for Taxation	-	-
	Profit/(loss) After Tax	**(4,973.89)**	**(6,155.20)**
	Appropriations		
	(A) Interim dividends paid during the year	-	-
	(B) Proposed final dividend	-	-
	(C) Dividend distribution tax	-	-
	(D) Transfer to any Reserves or Other Accounts	-	-
	Balance of profit / (loss) brought forward from last year	(78,009.55)	(71,854.35)
	Balance Carried Forward to Balance Sheet	**(82,983.44)**	**(78,009.55)**

FORM NL-3A-B-BS
Name of the Insurer: Max Bupa Health Insurance Company Limited
Registration No. and Date of Registration with the IRDAI : 145 Dated 15th February 2010

BALANCE SHEET AS AT 31st MARCH, 2021 (Rs. In Lakhs)

Particulars	As at 31st March, 2021	As at 31st March, 2020
Sources of Funds		
Share Capital	1,34,972.98	1,12,600.00
Share Application Money	-	-
Reserves And Surplus	5,678.72	-
Fair Value Change Account - Shareholders	12.99	0.03
Fair Value Change Account - Policyholders	0.65	1.80
Borrowings	-	-
Total	**1,40,665.34**	**1,12,601.83**
Application of Funds		
Investments - Shareholders	63,736.98	40,286.12
Investments - Policyholders	98,419.07	66,434.65
Loans	-	-
Fixed Assets	4,752.02	4,118.39
Current Assets		
Cash And Bank Balances	3,040.73	1,892.69
Advances And Other Assets	19,955.70	10,999.36
Sub-total (A)	**22,996.43**	**12,892.05**
Current Liabilities	63,595.12	38,922.21
Provisions	68,627.48	50,216.72
Sub-total (B)	**1,32,222.60**	**89,138.93**
Net Current Assets (C) = (A - B)	**(1,09,226.17)**	**(76,246.88)**
Miscellaneous Expenditure (to the extent not written off or adjusted)	-	-
Debit Balance In Profit And Loss Account	82,983.44	78,009.55
Total	**1,40,665.34**	**1,12,601.83**

Name of the Insurer: Max Bupa Health Insurance Company Limited
Registration No. and Date of Registration with the IRDAI : 145 Dated 15th February 2010

Analytical Ratios for Non-Life companies

SN	Particulars	For the year ended 31st March, 2021	For the year ended 31st March, 2020
1a	Gross Direct Premium Growth Rate (Overall)	41%	31%
1b	Gross Direct Premium Growth Rate (Health)	42%	29%
1c	Gross Direct Premium Growth Rate (Personal Accident)	27%	96%
2	Gross Direct Premium to Net Worth Ratio	3.04 times	3.59 times
3	Growth rate of Net Worth	67%	32%
4a	Net Retention Ratio (Overall)	77%	77%
4b	Net Retention Ratio (Health)	76%	76%
4c	Net Retention Ratio (Personal Accident)	90%	83%
5a	Net Commission Ratio - Overall	5%	4%
5b	Net Commission Ratio - Health	4%	4%
5c	Net Commission Ratio - Personal Accident	13%	12%
6	Expenses of Management to Gross Direct premium ratio	44%	46%
7	Expenses of Management to Net Written Premium Ratio	57%	60%
8	Net Incurred Claims to Net Earned Premium	56%	54%
9	Combined ratio	102%	102%
10	Technical Reserves to Net Premium Ratio	0.67 times	0.61 times
11	Underwriting balance Ratio	(0.09) times	(0.08) times
12	Operating Profit Ratio	11%	14%
13	Liquid assets to liabilities Ratio	0.52 times	0.54 times
14	Net Earnings Ratio	(4%)	(6%)
15	Return on net worth Ratio	(9%)	(18%)
16	Reinsurance Ratio	23%	23%
17	Available solvency margin to required solvency margin ratio	2.09 times	1.77 times
18	NPA ratio		
	- Gross NPA Ratio	4.95%	7.43%
	- Net NPA Ratio	0.31%	2.08%

ಖಾಸಗಿ ಆಸ್ಪತ್ರೆ ಅಂತಿಮ ಎಚ್ಚರಿಕೆ । ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಭೆ । ಪೊಲೀಸರಿಂದ ರಿಯಾಲಿಟಿ ಚೆಕ್

ನಿಮ್ಮಲ್ಲಿರುವ ಶೇ.50ರಷ್ಟು ಬೆಡ್ ಕೂಡಲೇ ನೀಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಖಾಸಗಿ ಆಸ್ಪತ್ರೆಗಳ ಹಾಸಿಗೆ ಹಂಚಿಕೆ ಮತ್ತು ಲಭ್ಯತೆ ಸಂಬಂಧಿಸಿದಂತೆ ಕಂದಾಯ ಸಚಿವ ಆರ್.ಅಶೋಕ್, ಗೃಹ ಸಚಿವ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆ ಮಂಗಳವಾರ ವರ್ಚುವಲ್ ಸಭೆ ನಡೆಯಿತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ 20–30 ಬೆಡ್ ಸಾಮರ್ಥ್ಯದ ಆಸ್ಪತ್ರೆಗಳು ಹಾಗೂ 100ಕ್ಕಿಂತ ಹೆಚ್ಚು ಹಾಸಿಗೆಗಳ ಆಸ್ಪತ್ರೆಗಳು ಸೇರಿದಂತೆ ಎಲ್ಲಾ ಆಸ್ಪತ್ರೆಗಳನ್ನು ಪರಿಶೀಲನೆ ನಡೆಸಿ ಶೇ.50 ಹಾಸಿಗೆಗಳನ್ನು ಕೂಡಲೆ ವಶಕ್ಕೆ ಪಡೆದುಕೊಳ್ಳಬೇಕು. ಜತೆಗೆ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳ ನೇತೃತ್ವದ ತಂಡವು ಹಾಸಿಗೆಗಳ ಲಭ್ಯತೆಯ ರಿಯಾಲಿಟಿ ಚೆಕ್ ನಡೆಸಿ ಎಷ್ಟು ಹಾಸಿಗೆಗಳಿವೆ ಎಂಬುದರ ನಿಖರ ಮಾಹಿತಿ ಪಡೆಯಬೇಕೆಂದು ಸಚಿವ ಆರ್.ಅಶೋಕ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಸ್ಪತ್ರೆಗಳಿಗೆ ಭೇಟಿ ನೀಡಿ: ನಗರದಲ್ಲಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳನ್ನು ಕೂಡಲೆ ಪರಿಶೀಲನೆ ನಡೆಸಿ ಕೋವಿಡ್ ಸೋಂಕಿತರಿಗೆ ಹೆಚ್ಚು ಹಾಸಿಗೆಗಳು ಲಭ್ಯವಾಗುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ನೋಡಲ್ ಅಧಿಕಾರಿಗಳು/ಪೊಲೀಸ್ ಅಧಿಕಾರಿಗಳು ಕೂಡಲೇ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ನಿಯಮಾನುಸಾರ ಹಾಸಿಗೆಗಳನ್ನು ವಶಕ್ಕೆ ಪಡೆದುಕೊಳ್ಳಬೇಕು. ಹಾಸಿಗೆಗಳು ನೀಡದ ಪಕ್ಷದಲ್ಲಿ ವಿಪತ್ತು ನಿರ್ವಹಣೆ ಕಾಯಿದೆ ಅಡಿ ಕಾನೂನು ರೀತಿಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, ನಗರದಲ್ಲಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ಹಾಸಿಗೆಗಳನ್ನು ವಶಪಡಿಸಿಕೊಳ್ಳಬೇಕು. ತಪ್ಪು ಮಾಹಿತಿ ನೀಡಿ ಹಾಸಿಗೆಗಳನ್ನು ನೀಡದಿರುವ ಆಸ್ಪತ್ರೆಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜತೆಗೆ ಆಸ್ಪತ್ರೆಗಳ ಸಹಯೋಗದಲ್ಲಿ ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ಹೆಚ್ಚಿಸಬೇಕು. ಸ್ಟೆಪ್ ಡೌನ್ ಆಸ್ಪತ್ರೆಯಲ್ಲಿ ಸದ್ಯ 960 ಹಾಸಿಗೆಗಳ ವ್ಯವಸ್ಥೆಯಿದ್ದು, ಅದನ್ನು ಕನಿಷ್ಠ 5 ಸಾವಿರ ಹಾಸಿಗೆಗಳಿಗೆ ಹೆಚ್ಚಳ ಮಾಡಲು ಅಧಿಕಾರಿಗಳಿಗೆ ತಿಳಿಸಿದರು.

ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ಅವರು ಮಂಗಳವಾರ ವರ್ಚುವಲ್ ಸಭೆ ನಡೆಸಿದರು.

{ ಗೌರವ್ ಗುಪ್ತಾ } ಬಿಬಿಎಂಪಿ ಮುಖ್ಯ ಆಯುಕ್ತ

100ಕ್ಕಿಂತ ಹೆಚ್ಚು ಹಾಸಿಗೆಗಳಿರುವ ಆಸ್ಪತ್ರೆಗಳಿಗೆ ಐಎಎಸ್, ಐಪಿಎಸ್ ಅಧಿಕಾರಿ ಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಮಾಡಿದ್ದು, ಆಯಾ ವಲಯದಲ್ಲಿ ಬರುವ ಆಸ್ಪತ್ರೆಗಳನ್ನು ಉಸ್ತುವಾರಿ ಮಾಡಬೇಕು.

ಲೋಪವಾಗದಂತೆ ಎಚ್ಚರವಹಿಸಿ: ಸೋಮಣ್ಣ

ಬೆಂಗಳೂರು: ಬಿಬಿಎಂಪಿ ವತಿಯಿಂದ ಸಜ್ಜುಗೊಳಿಸಲಾಗಿರುವ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಕೋವಿಡ್ ಸೋಂಕಿತರಿಗೆ ಯಾವುದೇ ಲೋಪವಾಗದಂತೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಬಿಬಿಎಂಪಿಯ ಪೂರ್ವ ವಲಯ ಕೋವಿಡ್–19 ಉಸ್ತುವಾರಿ ಸಚಿವ ಸೋಮಣ್ಣ ಸೂಚಿಸಿದರು.

- ಸಿ.ವಿ. ರಾಮನ್ ನಗರ ಕೋವಿಡ್ ಕೇರ್ ಸೆಂಟರ್‌ಗೆ ಸಚಿವ ಭೇಟಿ

ಮಂಗಳವಾರ ಸಿ.ವಿ. ರಾಮನ್ ನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಜ್ಜುಗೊಳಿಸಿರುವ ಕೋವಿಡ್ ಕೇರ್ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿ, ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಶೌಚಗೃಹ, ಫ್ಯಾನುಗಳ ವ್ಯವಸ್ಥೆ ಸಮರ್ಪಕವಾಗಿರಬೇಕೆಂದು ಸೂಚಿಸಿದರು. ಸಿಬ್ಬಂದಿ ಕೊರತೆ ಇದ್ದರೆ ತಕ್ಷಣವೇ ನೇಮಿಸಿಕೊಳ್ಳಲು ಆದೇಶ ನೀಡಿದ ಸಚಿವರು, ಸಂಕಷ್ಟದಲ್ಲಿರುವ ಕೋವಿಡ್ ರೋಗಿಗಳಿಗೆ ಮಾನಸಿಕವಾಗಿ ಸ್ಥೈರ್ಯ ತುಂಬುವ ಕೆಲಸವನ್ನು ವೈದ್ಯರು, ದಾದಿಯರು ಹಾಗೂ ಸಿಬ್ಬಂದಿ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಕೋವಿಡ್ ರೋಗಿಗಳಿಗೆ ಸೂಕ್ತ ಔಷಧೋಪಚಾರ, ಆಹಾರ ಪೂರೈಕೆ ಬಗ್ಗೆ ಸಚಿವರು ಪರಿಶೀಲನೆ ಮಾಡಿದರು. ಹೆಬ್ಬಾಳದ ರಾಜೀವ್ ಗಾಂಧಿ ಡೆಂಟಲ್ ಕಾಲೇಜು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು, ಬಿಬಿಎಂಪಿ ನಡೆಸುತ್ತಿರುವ ಕೋವಿಡ್ ಕೇರ್ ಸೆಂಟರ್‌ಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಲೋಕಸಭಾ ಸದಸ್ಯ ಪಿ.ಸಿ. ಮೋಹನ್, ಶಾಸಕ ಎಸ್. ರಘು, ವಸತಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ನಗರಪಾಲಿಕೆಯ ಜಂಟಿ ಆಯುಕ್ತ ಪಲ್ಲವಿ ಇದ್ದರು.

ಸ್ವಂತ ವಾಹನ ಬಳಕೆಗೆ ಅನುಮತಿ: ಪ್ರವೀಣ್ ಸೂದ್

ಬೆಂಗಳೂರು: ಅಗತ್ಯ ವಸ್ತುಗಳ ಖರೀದಿಗಾಗಿ ವಾಹನ ಬಳಸಬಾರದು ಎಂದು ಸರಕಾರ ಹೊರಡಿಸಿದ್ದ ಆದೇಶಕ್ಕೆ ಸಾರ್ವಜನಿಕ ವಲಯದಿಂದ ಸಾಕಷ್ಟು ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ರಾಜ್ಯ ಸರಕಾರವು ಬೈಕ್ ಇನ್ನಿತರ ವಾಹನದಲ್ಲಿ ಸಂಚರಿಸಲು ಅನುಮತಿ ನೀಡಿದೆ. ರಾಜ್ಯ ಪೊಲೀಸ್ ಇಲಾಖೆ ಮಹಾನಿರ್ದೇಶಕ (ಡಿಜಿಪಿ) ಪ್ರವೀಣ್ ಸೂದ್ ಅವರು ಈ ಸಂಬಂಧ ಟ್ವೀಟ್ ಮಾಡಿ, ದಿನಸಿ ಪದಾರ್ಥ ಸೇರಿದಂತೆ ಅಗತ್ಯ ವಸ್ತುಗಳ ಖರೀದಿಗಾಗಿ ಸ್ಥಳೀಯ ಮಾರುಕಟ್ಟೆಗೆ ಹೋಗಿ ಬರಲು ತಮ್ಮ ಸ್ವಂತ ವಾಹನ ಬಳಸಬಹುದು ಎಂದು ತಿಳಿಸಿದ್ದಾರೆ.ಕೊಟ್ಟಿರುವ ಅನುಮತಿ ದುರುಪಯೋಗ ಮಾಡಿಕೊಂಡರೆ ಕಾನೂನು ಕ್ರಮ ಕೈಗೊಳ್ಳಬಹುದು ಎಂದಿದ್ದಾರೆ.

ಸಾರಿಗೆ ಸಚಿವ ಲಕ್ಷ್ಮಣ ಸವದಿ ಮಾಹಿತಿ

ಸೇವೆಗೆ ಸಿದ್ಧವಾಗಿರುವ ನೂತನ ಆಕ್ಸಿಜನ್ ಬಸ್

ಬೆಂಗಳೂರು: ಕರೋನಾ ಪಿಡುಗು ಅಧಿಕವಾಗಿ ಸಾರ್ವಜನಿಕರು ಆಕ್ಸಿಜನ್‌ಗಾಗಿ ಪರಿತಪಿಸುವುದನ್ನು ತಪ್ಪಿಸಲು ಖಾಸಗಿ ಸ್ವಯಂ ಸೇವಾ ಸಂಸ್ಥೆಯ ಸಹಭಾಗಿತ್ವದಲ್ಲಿ ಬಿಎಂಟಿಸಿ ಸಂಸ್ಥೆಯು ಪ್ರಾಯೋಗಿಕವಾಗಿ ಮೊಬೈಲ್ ಆಕ್ಸಿಜನ್ ಘಟಕವನ್ನು ಪ್ರಾರಂಭಿಸಲು ಮುಂದಾಗಿದೆ ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

- ಬಿಎಂಟಿಸಿಯಿಂದ ಪ್ರಾಯೋಗಿಕ ಮೊಬೈಲ್ ಆಕ್ಸಿಜನ್ ಘಟಕ

ಪ್ರಸ್ತುತ ಬಹುತೇಕ ಎಲ್ಲಾ ಆಸ್ಪತ್ರೆಗಳಲ್ಲೂ ಕರೋನಾ ರೋಗಿಗಳ ದಟ್ಟಣೆ ಹೆಚ್ಚಾಗಿದೆ. ಇದರಿಂದಾಗಿ ಹೊಸ ರೋಗಿಗಳು ಆಸ್ಪತ್ರೆಗೆ ಬಂದಾಗ ಅವರಿಗೆ ಆಸ್ಪತ್ರೆಯಲ್ಲಿ ಆಕ್ಸಿಜನ್ ನೀಡುವುದು ವಿಳಂಬವಾಗಿ ತೀವ್ರ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ ಬಸ್ಸಿನಲ್ಲಿಯೇ ತುರ್ತು ಆಕ್ಸಿಜನ್ ಸೌಲಭ್ಯ ಒದಗಿಸಲು ಈ ನೂತನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ. ಆಕ್ಸಿಜನ್ ಪೂರೈಸುವ ಈ ವಿಶೇಷ ಬಸ್ಸನ್ನು ಸರಕಾರಿ ಆಸ್ಪತ್ರೆಯ (ಕೆ.ಸಿ. ಜನರಲ್ ಆಸ್ಪತ್ರೆ ಅಥವಾ ವಿಕ್ಟೋರಿಯಾ ಆಸ್ಪತ್ರೆ) ಆವರಣದಲ್ಲಿ ನಿಲ್ಲಿಸಲಾಗುವುದು ಹೊರಗಿನಿಂದ ಕರೋನಾ ಪೀಡಿತರು ಬಂದಾಗ ತಕ್ಷಣಕ್ಕೆ ಆಸ್ಪತ್ರೆಯ ಒಳಗೆ ಆಕ್ಸಿಜನ್ ಸಿಗದಿದ್ದರೆ ಆತಂಕ ಪಡದೇ ಈ ಆಕ್ಸಿಜನ್ ಮೊಬೈಲ್ ಬಸ್ಸಿನಲ್ಲಿಯೇ ತುರ್ತಾಗಿ ವಿಶ್ರಮಿಸಿ ಅಗತ್ಯ ಆಕ್ಸಿಜನ್ ಪಡೆದುಕೊಳ್ಳಲು ಸಾಧ್ಯವಾಗುವಂತೆ ವೈದ್ಯಕೀಯ ಉಪಕರಣಗಳನ್ನು ಇದರಲ್ಲಿ ಅಳವಡಿಸಲಾಗಿದೆ. ಸದ್ಯಕ್ಕೆ ಪ್ರಾಯೋಗಿಕವಾಗಿ ಒಂದು ಬಿಎಂಟಿಸಿ ಬಸ್‌ನ್ನು ಇದಕ್ಕಾಗಿ ಒದಗಿಸಲಾಗಿದೆ ಎಂದಿದ್ದಾರೆ. ಫೌಂಡೇಶನ್ ಇಂಡಿ ಯಾ ಎಂಬ ಸ್ವಯಂಸೇವಾ ಸಂಸ್ಥೆ ಅವರು ಈ ಬಸ್ಸಿನಲ್ಲಿ ಆಕ್ಸಿಜನ್ ಸರಬರಾಜು ಮಾಡಿ ಸೇವೆ ನೀಡಲು ಎಲ್ಲ ಅಗತ್ಯ ಉಪಕರಣಗಳನ್ನು ಅಳವಡಿಸುತ್ತಿದ್ದಾರೆ. ಏಕಕಾಲಕ್ಕೆ ಒಟ್ಟು ಆರು ಮಂದಿ ರೋಗಿಗಳಿಗೆ ಈ ಬಸ್ಸಿನಲ್ಲಿ ಆಕ್ಸಿಜನ್ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಲಾಠಿ ಇಲ್ಲದೆ ಲಾಕ್‌ಡೌನ್ ಯಶಸ್ವಿ

ಗೃಹ ಸಚಿವ ಬೊಮ್ಮಾಯಿ ಅಭಿಮತ

ಬೆಂಗಳೂರು: ಪೊಲೀಸರ ಬಲಪ್ರಯೋಗವಿಲ್ಲದೆ ಲಾಕ್‌ಡೌನ್ ಯಶಸ್ಸಿಗೆ ಜನರ ಸಹಕಾರ ಅವಶ್ಯ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ನಗರದ ವಿವಿಧ ಕೋವಿಡ್ ಸೆಂಟರ್‌ಗಳಿಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, ಬಲಪ್ರಯೋಗ ಮಾಡದೆ ಲಾಕ್‌ಡೌನ್ ಯಶಸ್ವಿಯಾಗಲಿ ಜನರ ಸಹಕಾರ ಅತಿ ಮುಖ್ಯ ಎಂದರು. ಬಲ ಪ್ರಯೋಗ ಮಾಡದೆ ಲಾಕ್‌ಡೌನ್ ಅನ್ನು ಯಶಸ್ವಿಗೊಳಿಸಬಹುದಾದ ಅನಿವಾರ್ಯತೆ ಇದೆ. ಅದಕ್ಕಾಗಿ ಲಾಠಿ ಪ್ರಹಾರ ಮಾಡದಂತೆ ಪೊಲೀಸರಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು. 14 ದಿನಗಳ ಲಾಕ್‌ಡೌನ್ ಸಂದರ್ಭದಲ್ಲಿ ಜನ ಸಹಕರಿಸಿದರೆ ಕೋವಿಡ್ ನಿಯಂತ್ರಣ ಸಾಧ್ಯವಾಗು ತ್ತದೆ. ಹಾಗಾಗಿ, ಕಾನೂನು ಉಲ್ಲಂಘಿಸುವವರ ವಿರುದ್ಧ ಬಲ ಪ್ರಯೋಗ ಮಾಡ ಲಾರದೆ ವಾಹನಗಳನ್ನು ಜಪ್ತಿ ಮಾಡುವುದೂ ಸೇರಿದಂತೆ ಹಲವು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ರೆಮಿಡಿಸಿವಿರ್ ಮಾರಾಟ: ಬಂಧನ

ಬೆಂಗಳೂರು: ಕಾಳ ಸಂತೆಯಲ್ಲಿ ರೆಮಿಡಿಸಿವಿರ್ ಚುಚ್ಚುಮದ್ದು ಮಾರಾಟ ಮಾಡುವವರ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿರುವ ಸಿಸಿಬಿ ಪೊಲೀಸರು ಖಾಸಗಿ ಆಂಬುಲೆನ್ಸ್ ಚಾಲಕ ಸೇರಿ ಇಬ್ಬರನ್ನು ಬಂಧಿಸಿ ತೀವ್ರ ವಿಚಾರಣೆ ನಡೆಸಿದ್ದಾರೆ. ಖಾಸಗಿ ಆಂಬುಲೆನ್ಸ್ ಚಾಲಕ ಸುನೀಲ್, ಫೋರ್ಟಿಸ್ ಆಸ್ಪತ್ರೆಯ ಸಿಬ್ಬಂದಿ ಸಂತೋಷ್ ಬಂಧಿತ ಆರೋಪಿಗಳಾಗಿದ್ದಾರೆ.ಆರೋಪಿಗಳು ಬಸವೇಶ್ವರ ನಗರದಲ್ಲಿ ರೆಮಿಡಿಸಿವಿರ್ ಇಂಜೆಕ್ಷನ್ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾಗ ಖಚಿತವಾದ ಮಾಹಿತಿಯನ್ನು ಆಧರಿಸಿ ಕಾರ್ಯಾಚರಣೆ ಕೈಗೊಂಡು ಬಂಧಿಸಲಾಗಿದೆ ಎಂದು ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್ ತಿಳಿಸಿದ್ದಾರೆ. ಆರೋಪಿಗಳಿಂದ 8 ರೆಮಿಡಿಸಿವಿರ್ ಚುಚ್ಚುಮದ್ದು ವಶಪಡಿಸಿಕೊಂಡು ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದರು.

ಕರೋನಾ ನಡುವೆ ಆ್ಯಕ್ಸಿಸ್ ಬ್ಯಾಂಕ್ ಆದಾಯ ಹೆಚ್ಚಳ

ಬೆಂಗಳೂರು: ಕರೋನಾ ಬಿಕ್ಕಟ್ಟಿನ ನಡುವೆಯೂ 2021ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕ ಅವಧಿಗೆ ತೆರಿಗೆ ಪಾವತಿ ನಂತರದ ಹೊಂದಾಣಿಕೆಯ ಲಾಭವು ವಾರ್ಷಿಕವಾಗಿ 93.4 ಕೋಟಿ ರು.ನಿಂದ 182.7 ಕೋಟಿ ರು.ಗೆ ಹೆಚ್ಚಳವಾಗಿದೆ ಕ್ರೆಡಿಟ್ ಆ್ಯಕ್ಸಿಸ್ ಗ್ರಾಮೀಣ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಉದಯ ಕುಮಾರ್ ಹೆಬ್ಬಾರ್ ತಿಳಿಸಿದ್ದಾರೆ.

ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ನಮ್ಮ ವ್ಯವಹಾರದ ಮಾದರಿ ಮತ್ತು ಸದೃಢ ಸ್ವರೂಪದಲ್ಲಿ ಇರುವ ಗ್ರಾಹಕ ಸಂಪರ್ಕದ ಕಾರಣದಿಂದ ನಾಲ್ಕನೇ ತ್ರೈಮಾಸಿಕದಲ್ಲಿ ಸಂಗ್ರಹ ದಕ್ಷತೆಯನ್ನು ಹೆಚ್ಚಿಸಲು ನಮಗೆ ಸಾಧ್ಯವಾಗಿದೆ. 2021ರ ಮಾರ್ಚ್ 31 ಅಂತ್ಯದ ವೇಳೆಗೆ 2,484.4 ಕೋಟಿ ರು. ನಗದು ಮತ್ತು ಒಟ್ಟು ಸಂಪತ್ತಿನ ಶೇ 16.5ರಷ್ಟು ನಗದನ್ನು ನಾವು ಹೊಂದಿದ್ದೇವೆ ಎಂದು ಹೇಳಿದ್ದಾರೆ.

ವಿವಿಧ ರಾಜ್ಯಗಳಲ್ಲಿ ಲಾಕ್‌ಡೌನ್‌ಗಳು ನಿರ್ಬಂಧಗಳನ್ನು ವಿಧಿಸಲಾಗುತ್ತಿರುವ ಕಾರಣ 2021ರ ಏಪ್ರಿಲ್‌ನಿಂದ ಜೂನ್ ವರೆಗಿನ ಅವಧಿಯಲ್ಲಿ ಸಂಗ್ರಹವು ತಾತ್ಕಾಲಿಕವಾಗಿ ಕಡಿಮೆಯಾಗಲಿದೆ ಎನ್ನುವುದು ನಮ್ಮ ನಿರೀಕ್ಷೆಯಾಗಿದೆ. ಸದ್ಯದ ಈ ಸವಾಲಿನ ಸಮಯದಲ್ಲಿ ನಾವು ನಮ್ಮ ಉದ್ಯೋಗಿಗಳು ಮತ್ತು ಗ್ರಾಹಕರ ಆರೋಗ್ಯ ರಕ್ಷಣೆಗೆ ಗಮನ ಕೇಂದ್ರೀಕರಿಸಿದ್ದೇವೆ. ಜಾರಿಯಲ್ಲಿ ಇರುವ ಅಡೆತಡೆಗಳು ನಮ್ಮ ವಹಿವಾಟಿನ ಮೇಲೆ ಬೀರುವ ಪರಿಣಾಮದ ಮೇಲೆ ನಾವು ನಿರಂತರವಾಗಿ ನಿಗಾ ಇರಿಸಿದ್ದೇವೆ. 2020–21ನೇ ಹಣಕಾಸು ವರ್ಷದಲ್ಲಿನ ನಮ್ಮ ಅನುಭವ ಬಳಸಿಕೊಂಡು 2021–22ನೇ ಹಣಕಾಸು ವರ್ಷದಲ್ಲಿ ನಮ್ಮ ವಹಿವಾಟನ್ನು ಸ್ಥಿರಗೊಳಿಸುತ್ತೇವೆ ಎಂದು ಅವರು ಹೇಳಿದ್ದಾರೆ.